**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54 /2022**

**ಸಾಕ್ಷಿಗೆ ದಿನಾಂಕ 05.08.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಿರೀಶ್ ಬಾಬು | ಪಿ.ಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | : | ಲೇಟ್ ದೊಡ್ಡ ತಿಮ್ಮಯ್ಯ | ಸಿ.ಡಬ್ಲ್ಯೂ-19 |
| ವಯಸ್ಸು | : | 49 | |
| ಉದ್ಯೋಗ | : | ಮೋಟಾರ್ ವಾಹನ ನಿರೀಕ್ಷರು | |
| ವಾಸಸ್ಥಳ | : | ಕೋಲಾರ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು 2018 ರಿಂದ 2022 ರ ವರೆಗೆ ಹುಣಸೂರು ಆರ್ ಟಿ ಓ ನಲ್ಲಿ ಮೋಟಾರ್ ವಾಹನ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.12.2021 ರಂದು ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಿಂದ 2 ವಾಹನಗಳನ್ನು ತಪಾಷಣೆ ಮಾಡಲು ಕೋರಿಕೊಂಡಂತೆ ಪತ್ರವನ್ನು ನೀಡಿದ್ದು ಅದರಂತೆ ಅದೇ ದಿನ ಕೆಎ 45- ಇ ಸಿ 1256 ಮತ್ತು ಕೆ ಎ 45 ಎ 0075 ಗೂಡ್ಸ್ ವಾಹನವನ್ನು ತಪಾಷಣೆ ಮಾಡಿ ವರದಿಯನ್ನು ದಿಃ 17.12.2021 ರಂದು

ನೀಡಿರುತ್ತೇನೆ. ಸಾಕ್ಷಿಗೆ ಐ ಎಂ ವಿ ವರದಿಯನ್ನು ತೋರಿಸಲಾಗಿ ಅದರಲ್ಲಿದ್ದ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನಾನು ಮೇಲೆ ಹೇಳಿದ 2 ವಾಹನಗಳನ್ನು ತಪಾಷಣೆ ಮಾಡಲಾಗಿ ಯಾವುದೇ ತಾಂತ್ರಿಕ ದೋಷ ಕಂಡುಬಂದಿರುವುದಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಕೆ ಎಸ್ ವಕೀಲರಿಂದಃ**

ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದದಂತೆ ಹೆಚ್ ಡಿ ಕೋಟೆ ಪೋಲೀಸರು ತಪಾಷಣೆ ಮಾಡುವಂತೆ ಕೋರಿಕೆ ಪತ್ರ ನೀಡಿದ ದಿನವೆ ನೀವು ವಾಹನ ತಪಾಷಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಗಳನ್ನು ತಪಾಷಣೆ ಮಾಡಿದ ಬಗ್ಗೆ ನಮ್ಮ ಇಲಾಖೆಯ ದಿನಚರಿ ಪುಸ್ತಕದಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಪುಸ್ತಕದ ದಾಖಲಾತಿಯನ್ನು ಪೋಲೀಸ್ ರವರಿಗೆ ನೀಡಿರುವುದಿಲ್ಲ ಎಂದರೆ ಸರಿ. ಪೋಲೀಸರಿಗೆ ಮತ್ತು ಪಿರ್ಯಾದುದಾರರಿಗೆ ಅನುಕೂಲವಾಗಲೀ ಎಂದು ಸುಳ್ಳು ಪ್ರಮಾಣ ಪತ್ರ ನೀಡಿರುತ್ತೇನೆ ಎಂದರ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ